## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 1670/2022

ಚಾಸಾ-4 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 19-05-2026

| | | |
|---|---|---|
| ಹೆಸರು | : | ವಿಶ್ವನಾಥ |
| ತಂದೆಯ ಹೆಸರು | : | ಸಿಧ್ರಾಮಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | PC-124 |
| ವಾಸಸ್ಥಳ | : | ಅಫಜಲಪುರ ಪಿ.ಎಸ್. |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2021 ರಿಂದ ಸ್ಧದವರೆಗೆ ನಾನು ಅಫಜಲಪೂರ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿಃ 22-02-2022 ರಂದು 4-00 ಗಂಟೆಗೆ ನಾವು ಠಾಣೆಯಲ್ಲಿದ್ದಾಗ ಚಾಸಾ 1 ರವರು ನನಗೆ ಚಾಸಾ 5 ರವರಿಗೆ ಕರೆದು ತಿಳಿಸಿದ್ದೇನೆಂದರೆ, ಮಲ್ಲಾಬಾದ ರೇವೂರು ಮುಖ್ಯ ರಸ್ತೆ ಚಿಂಚೋಳಿ ಸರಹದ್ದಿನಲ್ಲಿ ಯಾರೊ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ಭಾತ್ಮಿ ಬಂದಿದ್ದು, ದಾಳಿ ಮಾಡೋಣ ಮತ್ತು ಇಬ್ಬರು ಪಂಚರನ್ನು ಬರಮಾಡಿಕೊಂಡು ಬರಲು ತಿಳಿಸಿರುತ್ತಾರೆ. ಚಾಸಾ 2, 3 ರವರನ್ನು ಠಾಣೆಗೆ ಕರೆಸಿ ಅವರಿಗೆ ದಾಳಿ ವಿಷಯ ತಿಳಿಸಿ, ಪಂಚರಾಗಲು ಒಪ್ಪಿಕೊಂಡಿರುತ್ತಾರೆ. ನಂತರ 4-15 ಗಂಟೆಗೆ ಠಾಣಾ ಜೇಪಿನಲ್ಲಿ ಹೊರಟೆವು. 4-35 ಕ್ಕೆ ದಾಬಾ ಹತ್ತಿರ ಸ್ವಲ್ಪ ದೂರದಲ್ಲಿ ನಿಂತು ನೋಡಿಲಾಗಿ ಅಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯ ಮಾರಾಟ

ಮಾಡುತ್ತಿರುವುದು ನೋಡಿ ಖಚಿತಿಪಡಿಸಿಕೊಂಡು, ಪಂಚರ ಸಮಕ್ಷಮ ಆತನ ಮೇಲೆ ದಾಳಿ ಮಾಡಿ ಆತನಿಗೆ ಹಿಡಿದು ಆತನಿಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿರುತ್ತೇವೆ. ಆತನ ಬಳಿ ಯಾವುದೇ ಪರವಾನಿಗೆ ಇರುವುದಿಲ್ಲ . ಚಾಸಾ 1 ರವರು ರಟ್ಟಿನ ಪೆಟ್ಟಿಗೆಯಲ್ಲಿದ್ದ ಮದ್ಯದ ಟೆಟ್ರಾ ಪ್ಯಾಕೆಟುಗಳನ್ನು ನೆಲಕ್ಕೆ ಚೆಲ್ಲಿದರು ಮತ್ತು ಅವುಗಳನ್ನು ಎಲ್ಲಿಂದ ತಂದಿರುವುದಾಗಿ ವಿಚಾರಿಸಿದಾಗ ಅಫಜಲಪುರ ಪಟ್ಟಣದ ವಿವಿದ ವೈನಶಾಪದಿಂದ ತಂದಿರುವುದಾಗಿ ತಿಳಿಸಿರುತ್ತಾನೆ.

ಚಾಸಾ 1 ರವರು ಆತನ ಅಂಗ ಶೋದನೆ ಮಾಡಿದಾಗ ಅವನ ಹತ್ತಿರ ರೂ. 470/- ಗಳು ದೊರೆತಿರುತ್ತವೆ. ನಂತರ ಪಂಚರ ಸಮಕ್ಷಮ ಮದ್ಯದ ಟೆಟ್ರಾ ಪ್ಯಾಕೆಟುಗಳು ಮತ್ತು ದೊರೆತ ಹಣವನ್ನು ಜಪ್ತಿಪಡಿಸಿಕೊಂಡಿರುತ್ತೇವೆ. 4-45 ರಿಂದ 5-45 ರವರೆಗೆ ಜಪ್ತಿ ಪಂಚನಾಮೆ ಬರೆದಿರುತ್ತೇವೆ. ನಂತರ ಠಾಣೆಗೆ ಬಂದು ವರದಿ ನೀಡಿರುತ್ತೇವೆ.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಸೀಲು ಮಾಡಿದ ಬಿಳಿ ಬಟ್ಟೆ ತೆರೆದು ಅದರಲ್ಲಿರುವ 180 ML ನ ಬ್ಯಾಕಪೈಪರ ವಿಸ್ಕಿಯ 9 ಟೆಟ್ರಾ ಪ್ಯಾಕೆಟುಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **1** ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಇನ್ನೊಂದು ಸೀಲು ಮಾಡಿದ ಬಿಳಿ ಬಟ್ಟೆ ತೆರೆದು ಅದರಲ್ಲಿರುವ 90 ML ನ Original Choice ವಿಸ್ಕಿಯ 45 ಟೆಟ್ರಾ ಪ್ಯಾಕೆಟುಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **2** ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಮತ್ತೊಂದು ಸೀಲು ಮಾಡಿದ ಬಿಳಿ ಬಟ್ಟೆ ತೆರೆದು ಅದರಲ್ಲಿರುವ 180 ML ನ Officer Choice ವಿಸ್ಕಿಯ 6 ಟೆಟ್ರಾ ಪ್ಯಾಕೆಟುಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. **3** ಎಂದು ಗುರುತಿಸಲಾಯಿತು.

ಆರೋಪಿತನಿಂದ ಜಪ್ತಿಪಡಿಸಿಕೊಂಡ 470/- ರೂ. ಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **D.K.** ವಕೀಲರಿಂದಃ-</u>

ಚಾಸಾ 1 ನನ್ನ ಮೇಲಾಧಿಕಾರಿ ಎಂದರೆ ಸರಿ. ಅಫಜಲಪುರದಿಂದ ಗುನ್ಹೆಸ್ಥಳ 14 ಕಿ.ಮಿ. ದೂರ ಇರುತ್ತದೆ. ಮಲಾಬಾದಿಂದ 4 ಕಿ.ಮಿ. ದೂರ ಇರುತ್ತದೆ. ಗುನ್ಹೆಸ್ಥಳ ಚೆಕ್ಕುಬಂದಿ ಈಗ ನೆನಪಿಲ್ಲ ಆದರೆ ಅಲ್ಲಿ ಫ್ಯಾಮಿಲಿ ರೆಸ್ಟೋರೆಂಟ ಇರುತ್ತದೆ. ಠಾಣೆಯಿಂದ ಗುನ್ಹೆಸ್ಥಳಕ್ಕೆ ಹೋಗಲು 30 ನಿಮಿಷ

ಆಗಿರುತ್ತದೆ. ಚಾಸಾ 2, 3 ಸ್ವಾಕ್ಷ ವಿಟನೆಸ ಇರುತ್ತಾರೆ ಎಂದರೆ ಸರಿಯಲ್ಲ. ನಾವು ಆರೋಪಿ ಮೇಲೆ ದಾಳಿ ಮಾಡಿದಾಗ ಸಂಜೆ 4-45 ಆಗಿತ್ತು. ಆರೋಪಿತನು ರೇವೂರು-ಮಲ್ಲಾಬಾದ ಮುಖ್ಯರಸ್ತೆ ಮೇಲೆ ಸಾರಾಯಿ ಮಾರಾಟ ಮಾಡುತ್ತಿದ್ದನು. ರಸ್ತೆ ಯಾವ ದಿಕ್ಕಿಗೆ ಆರೋಪಿ ನಿಂತಿದ್ದನು ಎಂದರೆ ಸಾಕ್ಷಿ ಆತನು ರಸ್ತೆ ಮೇಲೆ ನಿಂತಿದ್ದನು ಎಂದು ನುಡಿಯುತ್ತಾರೆ. ಜಪ್ತಿಪಡಿಸಿಕೊಂಡ ರೂ. 470/- ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದು ಈಗ ಹೇಳಲು ಬರುವುದಿಲ್ಲ. ಪಂಚನಾಮೆ ಕಾಲಕ್ಕೆ ಆರೋಪಿಗೆ ಹಿಡಿದುಕೊಂಡು 6 ಜನ ಇದ್ದೆವು. ಪಂಚನಾಮೆ ಕಾಲಕ್ಕೆ ಸ್ಥಳೀಯರು ಇರಲಿಲ್ಲ. ಮು.ಮಾ. 1 ರಿಂದ 3 ಬೇರೆ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಆರೋಪಿಗೆ ಈ ಪ್ರಕರಣಕ್ಕೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಕಚೇರಿಯ ಅಂಕಿ ಸಂಖ್ಯೆಗೋಸ್ಕರ ಆರೋಪಿ ವಿರುದ್ದ ಸುಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ